ಸಂಖ್ಯೆ. 1/1/2007–ಡಿಸಿಎಚ್/ಡಬ್ಲ್ಯೂ ಡಬ್ಲ್ಯೂ / ಎಚ್‌ಡಬ್ಲ್ಯೂಸಿಡಬ್ಲ್ಯೂಎಸ್

# 11 ನೇ ಪಂಚವಾರ್ಷಿಕ ಯೋಜನೆಯಲ್ಲಿ (ಅಂದರೆ 2007–08 ರಿಂದ 2011–12) ನೇ ಸಾಲಿನಲ್ಲಿ ಮಹಾತ್ಮಗಾಂಧಿ ಬುನ್ಕರ್ ಬಿಮಾ ಯೋಜನೆ (ಎಂಜಿಬಿಬಿವೈ)ಯ ಅನುಷ್ಠಾನಕ್ಕೆ ಪೂರಕವಾದ ಮಾರ್ಗದರ್ಶನಗಳು

**ಪ್ರಸ್ತಾವನೆ:**

ಭಾರತ ಸರ್ಕಾರವು 'ಬುನ್ಕರ್ ಬಿಮಾ ಯೋಜನೆ'ಯನ್ನು 2003ರ ಡಿಸೆಂಬರ್ ತಿಂಗಳಲ್ಲಿ ಪರಿಚಯಿಸಿದೆ. ಇದು ಜನಶ್ರೀ ಬಿಮಾ ಯೋಜನೆ ಮತ್ತು ಆ್ಯಡ್ ಆನ್ ಜಿ.ಐ.ಎಸ್. ವಿಮಾ ಯೋಜನೆಗಳನ್ನು ಸೇರಿಸಿ ಭಾರತೀಯ ಜೀವ ವಿಮಾ ನಿಗಮದ ಸಹಕಾರದೊಂದಿಗೆ ಅನುಷ್ಠಾನಗೊಳಿಸಲಾಗಿದೆ. 2005–06ರಲ್ಲಿ ಈ ಯೋಜನೆಯನ್ನು ಪುನರ್‌ರಚಿಸಲಾಗಿದೆ ಮತ್ತು ಯೋಜನೆಗೆ ಮಹಾತ್ಮ ಗಾಂಧಿ ಬುನ್ಕರ್ ಯೋಜನೆ ಎಂದು ಮರುನಾಮಕರಣ ಮಾಡಲಾಗಿದೆ.

11ನೇ ಪಂಚವಾರ್ಷಿಕ ಯೋಜನೆಯಲ್ಲಿ 'ಮಹಾತ್ಮ ಗಾಂಧಿ ಬುನ್ಕರ್ ಯೋಜನೆ'ಯನ್ನು ಹೊಸ ಪ್ರಯೋಜನಗಳೊಂದಿಗೆ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯು 66,66,665 ನೇಕಾರರಿಗೆ 2007–08 ರಿಂದ 2011–12 ರ ಅವಧಿಯಲ್ಲಿ ಪ್ರತಿವರ್ಷವೂ ಗರಿಷ್ಟ ಮಟ್ಟದಲ್ಲಿ ಪುನರ್ ನವೀಕರಿಸುವ ಅವಕಾಶವನ್ನು ಕಲ್ಪಿಸಿದೆ.

**ಗುರಿ:**

ಕೈಮಗ್ಗ ನೇಕಾರರಿಗೆ ಸ್ವಾಭಾವಿಕ ಮತ್ತು ಅಫಘಾತದಿಂದ ಅಸಹಜ ಸಾವು ಸಂಭವಿಸಿದರೆ ಅಥವಾ ಸ್ವಲ್ಪ ವಿಕಲಾಂಗರಾದ ಕೈಮಗ್ಗ ನೇಕಾರರಿಗೂ ಹೆಚ್ಚುವರಿ ವಿಮಾ ಸೌಲಭ್ಯವನ್ನು ನೀಡುವುದು. ಮಹಾತ್ಮಗಾಂಧಿ ಬುನ್ಕರ್ ಬಿಮಾ ಯೋಜನೆಯ ಮೂಲ ಗುರಿಯಾಗಿರುತ್ತದೆ.

**ಅರ್ಹತೆ:**

1. ಯೋಜನೆಯ ಲಾಭವನ್ನು ಪಡೆಯಲು ನೇಕಾರನು ಕೆಳಕಂಡ ಷರತ್ತುಗಳನ್ನು ಪೂರೈಸಬೇಕು.

- ನೇಕಾರನು ತನ್ನ ಆದಾಯದ ಶೇ.50ರಷ್ಟು ಭಾಗವನ್ನು ಕೈಮಗ್ಗ ನೇಯ್ಗೆಯಿಂದಲೇ ಪಡೆಯುತ್ತಿರಬೇಕು.
- 18 ಮತ್ತು 59 ವಯೋಮಿತಿಯಲ್ಲಿರುವ ಹೆಣ್ಣು ಅಥವಾ ಗಂಡು ನೇಕಾರರು ಈ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ. ಇದರಲ್ಲಿ ಅಲ್ಪಸಂಖ್ಯಾತರೂ, ಮಹಿಳಾ ನೇಕಾರರೂ ಮತ್ತು ಈಶಾನ್ಯ ಪ್ರಾಂತ್ಯಕ್ಕೆ ಸೇರಿದ ನೇಕಾರರೂ ಒಳಪಡುತ್ತಾರೆ.
- ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ / ಅಪೆಕ್ಸ್ / ಪ್ರಾಥಮಿಕ ಕೈಮಗ್ಗ ನೇಕಾರರ ಸಹಕಾರ ಸಂಘಕ್ಕೆ ಸೇರಿದ ಮಹಿಳೆಯರೂ ಈ ಯೋಜನೆಯವ್ಯಾಪ್ತಿಗೆ ಬರುತ್ತಾರೆ. ರಾಜ್ಯ ಕೈಮಗ್ಗ ನಿರ್ದೇಶನಾಲಯ ಇಲಾಖೆಯಿಂದ ಪ್ರಮಾಣ ಪತ್ರ ಪಡೆದ ನೇಕಾರರ ಸೊಸೈಟಿಯಲ್ಲಿ ಸದಸ್ಯರಾಗದ ನೇಕಾರರೂ ಅರ್ಹ ತೆಯನ್ನು

ಹೊಂದಿದ್ದಲ್ಲಿ  ವಿಮಾ ಯೋಜನೆ ವ್ಯಾಪ್ತಿಗೆ ಬರುತ್ತಾರೆ.

- ಈ ಯೋಜನೆ ವ್ಯಾಪ್ತಿಗೆ ಬರುವ ನೇಕಾರರ ಅರ್ಹತೆಯನ್ನು ಪರಿಶೀಲಿಸುವ ಹೊಣೆಗಾರಿಕೆಯನ್ನು ರಾಜ್ಯ ಕೈಮಗ್ಗ ಇಲಾಖಾ ನಿರ್ದೇಶಕರೇ ವಹಿಸಬೇಕು.
- ಯೋಜನೆ ಜಾರಿ ಮಾಡುವ ಮುನ್ನ ಮಹಿಳಾ ನೇಕಾರರು, ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ನೇಕಾರರು ಮತ್ತು ಈಶಾನ್ಯ ಪ್ರಾಂತ್ಯ ರಾಜ್ಯದ (ಅರುಣಾಚಲ ಪ್ರದೇಶ, ಅಸ್ಸಾಂ, ಮಣಿಪುರ್, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ತ್ರಿಪುರ ಮತ್ತು ಸಿಕ್ಕಿಂ) ನೇಕಾರರಿಗೆ ಹೆಚ್ಚು ಪ್ರಾತಿನಿಧ್ಯ ಕೊಡಬೇಕು. ಅದರ ಹೊಣೆ ರಾಜ್ಯ ಕೈಮಗ್ಗ ಇಲಾಖಾ ನಿರ್ದೇಶನಾಲಯದ  ಮುಖ್ಯಸ್ಥರು ಮತ್ತು ಐಸಿಐಸಿಐ ಮೇಲಿರುತ್ತದೆ.

**ಆಡಳಿತ**

ಭಾರತೀಯ ಜೀವ ವಿಮಾ ನಿಗಮದ ಸಹಯೋಗದೊಂದಿಗೆ ಕೈಮಗ್ಗ ನಿರ್ದೇಶನಾಲಯ ಅಧಿಕಾರಿಗಳು ನೇಕಾರರಿಗೆ ಅನ್ವಯಿಸುವ ವಿಮಾ ಯೋಜನೆಯನ್ನು  ಅಂತಿಮಗೊಳಿಸಬೇಕು.

**ವಿಮಾ ಯೋಜನೆಯ ಮುಖ್ಯಾಂಶಗಳು**

1. ಯೋಜನೆಯ ಮೇಲ್ವಿಚಾರಣೆಯನ್ನು ಭಾರತೀಯ ಜೀವ ವಿಮಾ ನಿಗಮ ಮಾಡುತ್ತದೆ.

2. ಭಾರತೀಯ ಜೀವ ವಿಮಾ ನಿಗಮದ ಸಹಯೋಗದೊಂದಿಗೆ ಕೈಮಗ್ಗ ನಿರ್ದೇಶನಾಲಯ ಅಧಿಕಾರಿಗಳು ನೇಕಾರರಿಗೆ ಅನ್ವಯಿಸುವ ವಿಮಾ ಯೋಜನೆಯನ್ನು ಅಂತಿಮಗೊಳಿಸುತ್ತಾರೆ.

**ಲಾಭಗಳು**

| ಕ್ರ. ಸಂ. | ವಿವರ | ಲಾಭಗಳು 1.10.07 ರಿಂದ |
|---|---|---|
| 01 | ಸ್ವಾಭಾವಿಕ ಮರಣ * | 60,000 ರೂ. |
| 02 | ಅಪಘಾತದಲ್ಲಿ ಸಾವಿಗೀಡಾದರೆ | 1,50,000 ರೂ. |
| 03 | ಸಂಪೂರ್ಣ ವಿಕಲಾಂಗತೆ | 1,50,000 ರೂ. |
| 04 | ಪಾರ್ಶ್ವ ವಿಕಲಾಂಗತೆ | 75,000 ರೂ. |

**ಪ್ರೀಮಿಯಂ**

ಪ್ರತಿ ಸದಸ್ಯರು ವಾರ್ಷಿಕ 330 ರೂ ಪ್ರೀಮಿಯಂ ಅನ್ನು ಕೊಡಬೇಕು. ಅದನ್ನು ಹೀಗೆ ವಿಭಾಜಿಸಲಾಗಿದೆ.

| | |
|---|---|
| ಭಾರತ ಸರ್ಕಾರದ ದೇಣಿಗೆ | 150 ರೂ. |
| ನೇಕಾರರ ದೇಣಿಗೆ | 80 ರೂ. |
| ಎಲ್ಐಸಿ ದೇಣಿಗೆ | 100 ರೂ. |
| ಒಟ್ಟು ಪ್ರೀಮಿಯಂ ಮೊತ್ತ | 330 ರೂ. |

**ಕಾರ್ಯಕಾರಿ ವಿಧಾನ**

1. ಪ್ರತಿ ವರ್ಷ ಪ್ರೀಮಿಯಂ ಪಾವತಿ ಮಾಡಿದ ನಂತರವೇ ಯೋಜನೆ ಪುನರುಜ್ಜೀವನಗೊಳ್ಳುತ್ತದೆ. ಇಡೀ ವರ್ಷಕ್ಕೆ ಅನ್ವಯವಾಗುವಂತೆ ಪ್ರೀಮಿಯಂ ಹಣವನ್ನು ಒಂದೇ ಕಂತಿನಲ್ಲಿ ಫಲಾನುಭವಿ ಎಲ್ಐಸಿಗೆ ಪಾವತಿಸಬೇಕು. ಈ ಯೋಜನೆಯು 1.10.2007ರಿಂದ ಚಾಲ್ತಿಯಲ್ಲಿ ಇರುತ್ತದೆ.

2. ಪ್ರೀಮಿಯಂ ಪಾವತಿ ಮಾಡಿದ ಹಣವನ್ನು ಯಾವ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

3. ಯೋಜನೆಯನ್ನು ಪ್ರತಿವರ್ಷ ನವೀಕರಿಸಲು (ಪುನರುಜ್ಜೀವನ) ಮಾಡಿಸಬೇಕು. ಪೂರ್ಣ ಪ್ರೀಮಿಯಂ ಮೊತ್ತದ ರಸೀದಿಗಳನ್ನು (ಅಂದರೆ ಸರ್ಕಾರ ಮತ್ತು ಫಲಾನುಭವಿಯ ಷೇರು) ಪಡೆದ ನಂತರವೇ ವಿಮೆಯು ಚಾಲ್ತಿಗೆ ಬರುತ್ತದೆ. ಕೆಲವೊಂದು ಅನಪೇಕ್ಷಿತ ಸಂದರ್ಭಗಳಲ್ಲಿ ಸರ್ಕಾರದ ಪಾಲು ಸಿದ್ಧವಾಗಿರದ ಪಕ್ಷದಲ್ಲಿ ಭಾರತೀಯ ಜೀವ ವಿಮಾ ನಿಗಮವು ಫಲಾನುಭವಿಯ ಪಾಲನ್ನು ಸ್ವೀಕರಿಸುತ್ತದೆ ಮತ್ತು ವಿಮಾ ವ್ಯಾಪ್ತಿಯನ್ನು ಅದಕ್ಕೆ ಅನುಗುಣವಾಗಿ ಜಾರಿಯಲ್ಲಿ ಇಡುತ್ತದೆ.

4. ರಾಜ್ಯ ಕೈಮಗ್ಗ ಮತ್ತು ಜವಳಿ ಇಲಾಖಾ ನಿರ್ದೇಶನಾಲಯದ ಮುಖ್ಯಸ್ಥರ ಕಚೇರಿ ಮತ್ತು ಅದರ ಉಪ ವಿಭಾಗದ ಕಚೇರಿಗಳು ಯೋಜನೆ ಅನುಷ್ಠಾನ ಜಾರಿ ಮಾಡುವ ನೋಡಲ್ ಏಜೆನ್ಸಿಗಳಾಗಿರುತ್ತವೆ. ನೋಡಲ್ ಏಜೆನ್ಸಿಗಳು ಫಲಾನುಭವಿಯ ಪರವಾಗಿ ವಿಮಾ ವ್ಯಾಪ್ತಿಗೆ ಸಂಬಂಧಿಸಿದ ಎಲ್ಲಾ ವಿಚಾರಗಳಲ್ಲೂ ಕಾರ್ಯ ನಿರ್ವಹಿಸುತ್ತವೆ. ಭಾರತೀಯ ಜೀವ ವಿಮಾ ನಿಗಮವು ಗರಿಷ್ಠ ನೇಕಾರರನ್ನು ಯೋಜನೆಯ ವ್ಯಾಪ್ತಿಗೆ ತರುವ ಸಲುವಾಗಿ ಮತ್ತು ನೇಕಾರ ಫಲಾನುಭವಿಯ ಗುರುತು ಪತ್ತೆ ಹಚ್ಚಲು, ಅರ್ಜಿಗಳನ್ನು ಭರ್ತಿ ಮಾಡಲು, ನಿರ್ದೇಶನಗಳನ್ನು ನೀಡಲು ರಾಜ್ಯ ಕೈಮಗ್ಗ ಇಲಾಖಾ ನಿರ್ದೇಶನಾಲಯದ ಮುಖ್ಯಸ್ಥರೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡಿರುತ್ತದೆ.

5. ಪ್ರಗತಿಪರ ಫಲಾನುಭವಿಗಳು ಅರ್ಜಿಯೊಂದಿಗೆ ನಾಮನಿರ್ದೇಶನ ಅರ್ಜಿಯನ್ನು ಭರ್ತಿ ಮಾಡಬೇಕು. ನೋಡಲ್ ಏಜೆನ್ಸಿಗೆ ಅವನ / ಅವಳ ಪ್ರೀಮಿಯಂ ಮೊತ್ತವನ್ನು ಸಲ್ಲಿಸಬೇಕು. ನೋಡಲ್ ಏಜೆನ್ಸಿ ಕಚೇರಿಯಲ್ಲೇ ಅರ್ಜಿಗಳು ಸಿಗುತ್ತವೆ. ಇದಕ್ಕಾಗಿ ಯಾವುದೇ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸುವ ಅವಶ್ಯಕತೆ ಇಲ್ಲ.

6. ಅರ್ಜಿ ಸ್ವೀಕರಿಸಿದ ನಂತರ, ನೋಡಲ್ ಏಜೆನ್ಸಿಗಳು ಅರ್ಜಿಯ ಪರಿಶೀಲನೆ ಮಾಡಬೇಕು. ಅರ್ಹ ಅರ್ಜಿದಾರನಿಂದ ಪ್ರೀಮಿಯಂ ಹಣವನ್ನು ಸ್ವೀಕರಿಸಬೇಕು. ಅಂತಹ ಫಲಾನುಭವಿಗಳ ಪಟ್ಟಿಯನ್ನು ಜೊತೆಗೆ ಪ್ರೀಮಿಯಂ ಹಣವನ್ನು ಎಲ್ಐಸಿ ಕಚೇರಿಗೆ ಕಳುಹಿಸುವುದು.

7. ಫಲಾನುಭವಿಗಳ ಪಟ್ಟಿ ಮತ್ತು ಪ್ರೀಮಿಯಂ ಹಣವನ್ನು ನೋಡಲ್ ಏಜೆನ್ಸಿಗಳಿಂದ ಸ್ವೀಕರಿಸಿದ ನಂತರ ಎಲ್‌ಐಸಿಯು ಕಾರ್ಡ್ / ಸರ್ಟಿಫಿಕೇಟ್‌ಗಳನ್ನು ಯೋಜನೆಯ ವ್ಯಾಪ್ತಿಗೆ ಬರುವ ಎಲ್ಲಾ ನೇಕಾರರಿಗೂ ನೀಡುತ್ತದೆ. ಈ ಕಾರ್ಡುಗಳಲ್ಲಿ ಪರಿಷ್ಕರಿಸಬೇಕಾದ ತಿಂಗಳು / ದಿನಾಂಕವನ್ನು ನಮೂದಿಸರಬೇಕು. ಕಾರ್ಡುಗಳು ಸ್ಥಳೀಯ ಭಾಷೆಯಲ್ಲೇ ಇರತಕ್ಕದ್ದು. ಇದರ ಸಹಾಯದಿಂದ ನೇಕಾರರು ಎಲ್‌ಐಸಿ ಇಂದ ತಮಗೆ ಬರಬೇಕಾದ ಹಣವನ್ನು ಪಡೆಯ ಬಹುದಾಗಿದೆ.

8. ಒಂದು ವೇಳೆ ಫಲಾನುಭವಿಗೆ ಮರಣ ಅಥವಾ ವಿಕಲಾಂಗತೆ ಉಂಟಾದರೆ, ಸಂಬಂಧಿತ ನಾಮನಿರ್ದೇಶನ / ಫಲಾನುಭವಿಯು ತನ್ನ ಬೇಡಿಕೆಯನ್ನು ನೋಡಲ್ ಏಜೆನ್ಸಿಗಳ ಮೂಲಕ ಎಲ್‌ಐಸಿಗೆ ಅರ್ಜಿಯನ್ನು ಸಲ್ಲಿಸಬೇಕು. ಅದರೊಂದಿಗೆ ಅವಶ್ಯವಾದ ಪ್ರಮಾಣಪತ್ರಗಳನ್ನು ಲಗತ್ತಿಸಬೇಕು. ಉದಾ: ಮರಣ ಪ್ರಮಾಣ ಪತ್ರ / ಪೋಸ್ಟ್ ಮಾರ್ಟಮ್ ಪರೀಕ್ಷಾ ವರದಿ / ವೈದ್ಯಕೀಯ ವರದಿ / ಆಸ್ಪತ್ರೆಯಿಂದ ಬಿಡುಗಡೆಯಾದ ಬಗ್ಗೆ ಬಿಡುಗಡೆ ಪ್ರಮಾಣ ಪತ್ರ ಮತ್ತು ಇನ್ನಿತರ ದಾಖಲೆ ಪತ್ರಗಳನ್ನು ಎಲ್‌ಐಸಿಗೆ 15 ದಿನಗಳ ಒಳಗಾಗಿ ಸಲ್ಲಿಸಬೇಕು. ಅರ್ಜಿ ಸ್ವೀಕರಿಸಿದ ಒಂದು ತಿಂಗಳಲ್ಲಿ ಎಲ್‌ಐಸಿ ಹಣವನ್ನು ಫಲಾನುಭವಿ / ನಾಮನಿರ್ದೇಶನ ಮಾಡಿದವರ ಹೆಸರಿಗೆ ಕ್ರಾಸ್ ಚೆಕ್ ಮೂಲಕ ಸಲ್ಲಿಸುತ್ತದೆ (ನೋಡಲ್ ಏಜೆನ್ಸಿಯ ಮಾಹಿತಿ ಮೇರೆಗೆ) ಅಥವಾ ನೋಡಲ್ ಏಜೆನ್ಸಿಯ ಮೂಲಕ ಪಾವತಿಸುತ್ತದೆ.

9. ಒಂದು ವೇಳೆ ವಿಮಾ ಕಂತನ್ನು ಬರುವ ವರ್ಷ ಫಲಾನುಭವಿ ಕಟ್ಟದ ಪಕ್ಷದಲ್ಲಿ, ವಿಮಾ ವ್ಯಾಪ್ತಿಯು ರದ್ದಾಗುತ್ತದೆ. ಆದರೆ ಫಲಾನುಭವಿಯು ತಕ್ಕುದಾದ ಪ್ರೀಮಿಯಂ ಕಂತನ್ನು ಪಾವತಿಸುವ ಮೂಲಕ ಯಾವುದೇ ಕ್ಷಣದಲ್ಲೂ ಮತ್ತೆ ಯೋಜನೆ ವ್ಯಾಪ್ತಿಗೆ ಬರುತ್ತಾನೆ.

10. ಕೈಮಗ್ಗ ನೇಕಾರ ಒಂದು ವೇಳೆ ವಿಮಾ ಅವಧಿಯಲ್ಲಿ ಒಂದು ಸೊಸೈಟಿ/ನಿಗಮದಿಂದ ಮತ್ತೊಂದು ಸೊಸೈಟಿ/ನಿಗಮಕ್ಕೆ ತನ್ನ ನೌಕರಿಯನ್ನು ಬದಲಾಯಿಸಿದರೆ ಅವನು / ಅವಳು, ಯೋಜನೆಯ ಫಲಾನುಭವಿಗಳು ಸಂಬಂಧಿತ ಏಜೆನ್ಸಿಗಳಿಗೆ ವಿಷಯವನ್ನು ತಿಳಿಸಬೇಕು.

11. ರಾಜ್ಯ ಸರ್ಕಾರ ಮತ್ತು ರಾಜ್ಯ ಕೈಮಗ್ಗ ನಿಗಮ / ಅಪೆಕ್ಸ್ / ಪ್ರಾಥಮಿಕ ಕೈಮಗ್ಗ ನೇಕಾರರ ಸಹಕಾರ ಸಂಘ/ಕೇಂದ್ರಾಡಳಿತ ಪ್ರದೇಶಗಳು/ಒಕ್ಕೂಟಗಳು ಯೋಜನೆಯನ್ನು ಅನುಷ್ಠಾನಕ್ಕೆ ತರುವಲ್ಲಿ ಕ್ರಿಯಾಶೀಲರಾಗಿರಬೇಕು. ಮುದ್ರಣ ಮಾಧ್ಯಮ ಮತ್ತು ಇನ್ನಿತರೆ ಮಾಧ್ಯಮಗಳ ಮೂಲಕ ಜಾಹಿರಾತು ಕೊಡಬೇಕು.

12. ನೋಡಲ್ ಏಜೆನ್ಸಿಗಳು ಮಾಸಿಕ ವರದಿಗಳನ್ನು ಕಳುಹಿಸಬೇಕು. ಅದರಲ್ಲಿ ವಿಮಾ ವಿವರಗಳನ್ನು, ಜವಳಿ ಸಚಿವಾಲಯ, ಕೈಮಗ್ಗ ಅಭಿವೃದ್ಧಿ ಆಯುಕ್ತರ ಸಹಿಯನ್ನು ನಮೂದಿಸಿರಬೇಕು.

**ವಿಶೇಷ ಸೌಲಭ್ಯಗಳು**

1. 'ಮಹಾತ್ಮಗಾಂಧಿ ಬುನ್ಕರ್ ಬಿಮಾ ಯೋಜನೆ'ಯ ಫಲಾನುಭವಿಗಳ ಮಕ್ಕಳಿಗೆ 'ಶಿಕ್ಷಾ ಸಹಯೋಗ್ ಯೋಜನೆ' ಅಡಿಯಲ್ಲಿ ಶಿಷ್ಯವೇತನ ಕೊಡಲಾಗುತ್ತದೆ.

2. ನಾಲ್ಕು ತಿಂಗಳಿಗೊಮ್ಮೆ 300 ರೂಪಾಯಿ ಶಿಷ್ಯವೇತನವನ್ನು 9 ರಿಂದ 12ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ನಾಲ್ಕು ವರ್ಷದವರೆಗೆ ಅಥವಾ 12ನೇ ತರಗತಿ ವಿದ್ಯಾಭ್ಯಾಸ ಪೂರ್ಣವಾಗುವ ತನಕ (ಯಾವುದು ಮೊದಲೋ ಅದಕ್ಕೆ ಅನ್ವಯಿಸುವಂತೆ) ಕೊಡಲಾಗುವುದು. ಶಿಷ್ಯವೇತನವನ್ನು ಶೈಕ್ಷಣಿಕ ವರ್ಷ ಜೂನ್ ನಿಂದ ಮೇ ತಿಂಗಳ ಒಳಗೆ ನೀಡಲಾಗುವುದು.

3. ಈ ಯೋಜನೆ ಸದಸ್ಯನ ಎರಡು ಮಕ್ಕಳಿಗೆ ಮಾತ್ರ ಅನ್ವಯಿಸುತ್ತದೆ. ಲಿಂಗಭೇದವಿಲ್ಲದೆ ಎರಡೂ ಮಕ್ಕಳನ್ನು ಶಿಷ್ಯವೇತನದ ವ್ಯಾಪ್ತಿಯಲ್ಲಿ ಸೇರಿಸಿಕೊಳ್ಳಲಾಗುವುದು.

4. ವಿದ್ಯಾರ್ಥಿಯು ನಪಾಸಾದರೆ ಮತ್ತು ಅದೇ ತರಗತಿಯಲ್ಲಿ ಉಳಿದರೆ ಶಿಷ್ಯವೇತನಕ್ಕೆ ಅನರ್ಹನಾಗುತ್ತಾನೆ. ಎಂಜಿಬಿಬಿವೈ – ಶಿಕ್ಷಾ ಸಹಯೋಗ ಯೋಜನೆ ಫಲಾನುಭವ ಪಡೆಯುತ್ತಿರುವ ಕುಟುಂಬದ ಪ್ರತಿಭಾನ್ವಿತ ಮತ್ತು ಅರ್ಹ ವಿದ್ಯಾರ್ಥಿಗಳನ್ನು ಬೆಳಕಿಗೆ ತರುವುದು. ಬೇರೆ ನೇಕಾರ ಕುಟುಂಬದ ಮಕ್ಕಳನ್ನೂ ಪ್ರೋತ್ಸಾಹಿಸುವುದು ಯೋಜನೆಯ ಉದ್ದೇಶವಾಗಿದೆ.

5. ಒಮ್ಮೆ ಒಬ್ಬ ನೇಕಾರ ಮಹಾತ್ಮಗಾಂಧಿ ಬುನ್ಕರ್ ಬಿಮಾ ಯೋಜನೆಗೆ ಸೇರ್ಪಡೆಯಾದ ಮೇಲೆ ಫಲಾನುಭವಿಯ ಲೆಕ್ಕಾಚಾರ ಹಾಕುವಾಗ ಮತ್ತೆ ಅವನ ಆದಾಯ ದೃಢೀಕರೀಸಬೇಕಾದ ಅವಶ್ಯಕತೆ ಇರುವುದಿಲ್ಲ.

6. ಶಿಷ್ಯವೇತನ ಪಡೆಯುತ್ತಿರುವ ಪಾಲಕರಿಗೆ ಅಥವಾ ಸಂಬಂಧಿತ ಏಜೆನ್ಸಿಗೆ ಯಾವುದೇ ಪ್ರೀಮಿಯಂ ಅನ್ನು ವಿಧಿಸುವುದಿಲ್ಲ. ಇದು ಮಹಾತ್ಮಗಾಂಧಿ ಬುನ್ಕರ್ ಬಿಮಾ ಯೋಜನೆಯ ಅಡಿಯಲ್ಲಿ ಬರುವ ಫಲಾನುಭವಿಗಳಿಗೆ ಸಿಗುವ ವಿಶೇಷ ಸೌಲಭ್ಯವಾಗಿದೆ. ಮಹಾತ್ಮಗಾಂಧಿ ಬುನ್ಕರ್ ಬಿಮಾ ಯೋಜನೆಯ ಅಡಿ ಬರುವ ಫಲಾನುಭವಿ ಪುನರ್‌ನವೀಕರಿಸಬೇಕಾದ ದಿನಾಂಕದ ಒಳಗೆ ಪ್ರೀಮಿಯಂ ಪಾವತಿ ಮಾಡದಿದ್ದರೆ ಅಂತಹ ವಿದ್ಯಾರ್ಥಿಯು ಶಿಷ್ಯವೇತನಕ್ಕೆ ಅರ್ಹವಾಗಿರುವುದಿಲ್ಲ.

7. 'ಮಹಾತ್ಮಗಾಂಧಿ ಬುನ್ಕರ್ ಬಿಮಾ ಯೋಜನೆ'ಯ ಸದಸ್ಯರಿಂದ 'ಶಿಕ್ಷಾ ಸಹಯೋಗ ಯೋಜನೆ'ಗೆ ಆಯ್ಕೆಯಾದ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು. ಯಾವುದೇ ಲಿಂಗಬೇಧವಿಲ್ಲದೆ ಸೀಮಿತ ಶಿಷ್ಯವೇತನ ಸೌಲಭ್ಯ ಇರುವ ಕಾರಣ, ಹೀಗೆ ನಿರ್ದೇಶನಗೊಂಡ ರಾಜ್ಯದ ಫಲಾನುಭವಿ ವಿದ್ಯಾರ್ಥಿಗಳನ್ನು ಸದಸ್ಯರ ಪ್ರಮಾಣದ ಆಧಾರದ ಮೇಲೆ ವಿಭಾಗಿಸಲಾಗುವುದು. ಅವರಲ್ಲಿ ಶಿಷ್ಯವೇತನ ಫಲಾನುಭವಿಗಳನ್ನು ಅಂತಿಮವಾಗಿ ಆಯ್ಕೆ ಮಾಡಿಕೊಳ್ಳುವಾಗ ಬಡವರಲ್ಲಿ ಬಡವರಿಗೆ ಆದ್ಯತೆ ನೀಡಲಾಗುವುದು.

8. ಮಹಾತ್ಮಗಾಂಧಿ ಬುನ್ಕರ್ ಬಿಮಾ ಯೋಜನೆಯ ಸದಸ್ಯರ ಮಕ್ಕಳು ಶಿಷ್ಯವೇತನ ಪಡೆಯಲು ಅರ್ಹರಾಗಿರುತ್ತಾರೆ. ಶಿಷ್ಯವೇತನ ಪಡೆಯಲು ಇಚ್ಛಿಸುವ ಮಕ್ಕಳು ನೋಡಲ್ ಏಜನ್ಸಿಗಳಿಂದ ಅರ್ಜಿಯನ್ನು ಪಡೆದು ಭರ್ತಿ ಮಾಡಿ ಏಜೆನ್ಸಿಗೆ ನೀಡಬೇಕು. ಭರ್ತಿ ಮಾಡಿದ ಅರ್ಜಿಗಳು ಮತ್ತು ಫಲಾನುಭವಿ ವಿದ್ಯಾರ್ಥಿಗಳ ಪಟ್ಟಿಯನ್ನು ನೋಡಲ್ ಏಜನ್ಸಿಗಳು ಎಲ್ಐಸಿ ಪಿ&ಜಿಎಸ್ ವಿಭಾಗಕ್ಕೆ ಶಿಷ್ಯವೇತನವನ್ನು 'ಶಿಕ್ಷಾ ಸಹಯೋಗ ಯೋಜನೆ' ವ್ಯಾಪ್ತಿಯಲ್ಲಿ ನೀಡಲು ಕಳುಹಿಸಬೇಕು. ಸಂಬಂದಿತ ನೋಡಲ್ ಏಜನ್ಸಿ ಮೂಲಕ ಶಿಷ್ಯವೇತನವನ್ನು ವಿತರಿಸಲಾಗುವುದು.

9. ಎಲ್ಐಸಿಯು ನೋಡಲ್ ಏಜೆನ್ಸಿಯ ಹೆಸರಲ್ಲಿ ಕ್ರಾಸ್ಡ್ ಚೆಕ್‌ಗಳನ್ನು ಕಳುಹಿಸುವುದು. ಇದರೊಂದಿಗೆ ಫಲಾನುಭವಿ ವಿದ್ಯಾರ್ಥಿಗಳ ಹೆಸರಿನ ಪಟ್ಟಿಯೂ ಇರುತ್ತದೆ. ನೋಡಲ್ ಏಜೆನ್ಸಿಯು ದಾಖಲೆಗಳನ್ನು ಇಟ್ಟುಕೊಳ್ಳಬೇಕು ಮತ್ತು ಮಾಸಿಕ ಸರ್ಟಿಫಿಕೇಟ್ ಆಫ್ ಯುಟಿಲೈಸೇಷನ್ ಅನ್ನು ಎಲ್ಐಸಿ, ಪಿ&ಜಿಎಸ್ ಘಟಕಕ್ಕೆ ಕಳುಹಿಸಬೇಕು.

**ಬೇಡಿಕೆಯ ನಡವಳಿಕೆಗಳು:**

ಮರಣಹೊಂದಿದ ಫಲಾನುಭವಿ ಸದಸ್ಯನ ಅಸಲಿ ಮರಣ ಪ್ರಮಾಣ ಪತ್ರವನ್ನು ನೋಡಲ್ ಏಜೆನ್ಸಿಗೆ ಕಳುಹಿಸಬೇಕು. ಆ ನಂತರ ನೋಡಲ್ ಏಜೆನ್ಸಿಯು ಬೇಡಿಕೆ ಪತ್ರಗಳೊಂದಿಗೆ ಪ್ರಮಾಣ ಪತ್ರಗಳನ್ನು ಎಲ್ಐಸಿಗೆ ಅಂದರೆ: ಯಾವ ಶಾಖೆ ವಿಮಾ ವ್ಯಾಪ್ತಿಯನ್ನು ಅಂತಿಮಗೊಳಿಸಿರುತ್ತದೋ ಆ ಶಾಖೆಗೆ ಕಳುಹಿಸಬೇಕು. ಎಲ್ಐಸಿಯು ಬೇಡಿಕೆಯನ್ನು ಕ್ರಾಸ್ಡ್ ಚೆಕ್ ಅನ್ನು ಫಲಾನುಭವಿಗೆ ನೇರವಾಗಿ ಕಳುಹಿಸುವುದು. ಆದರೆ, ಈ ವಿಚಾರ ಕುರಿತ ಮಾಹಿತಿಯನ್ನು ಸಂಬಂಧಿತ ರಾಜ್ಯ ಸರ್ಕಾರ ಮತ್ತು ಕೈಮಗ್ಗ ಅಭಿವೃದ್ಧಿ ಆಯುಕ್ತರ ಕಚೇರಿಗೆ ಕಳುಹಿಸುವುದು. ಒಂದು ವೇಳೆ ಅಪಘಾತಗಳಾದಲ್ಲಿ ಪೊಲೀಸರ ವಿಚಾರಣಾ ವರದಿಯನ್ನೂ ಮಂಡಿಸಬೇಕಾಗುತ್ತದೆ.

ಎಲ್ಐಸಿಯ ಸಾಮಾಜಿಕ ಭದ್ರತಾ ಒಕ್ಕೂಟಗಳ ಯೋಜನೆಗಳ ನಡವಳಿಕೆಗಳ ಪ್ರಕಾರ ನಡೆಯುತ್ತದೆ.

**ಹಣ ಬಿಡುಗಡೆ**

1. ಹಣವನ್ನು ಬಿಡುಗಡೆ ಮಾಡುವಾಗ, ಎಲ್ಐಸಿ ಮತ್ತು ರಾಜ್ಯ ಕೈಮಗ್ಗ ಪ್ರಾಧಿಕಾರದ ಅಧ್ಯಕ್ಷರು ಎಂಜಿಬಿಬಿವೈ ವ್ಯಾಪ್ತಿಗೆ ಬರುವ ನೇಕಾರರನ್ನು ಗುರುತಿಸಬೇಕು. ಯೋಜನೆ ವ್ಯಾಪ್ತಿಯಲ್ಲಿ ಬರುವ ಕೈಮಗ್ಗ ನೇಕಾರರ ಸಂಖ್ಯೆಯನ್ನು ಆಧರಿಸಿ ಕೈಮಗ್ಗ ಅಭಿವೃದ್ಧಿ ಆಯಕ್ತರ ಕಚೇರಿ (ಡಿಸಿಎಚ್ಎಲ್), ಭಾರತ ಸರ್ಕಾರದ (ಜಿಒಐ) ಜವಳಿ ಸಚಿವಾಲಯ (ಎಂಒಟಿ)ವು ಪ್ರೀಮಿಯಂ ಆಧರಿಸಿ ತನ್ನ ಷೇರುಗಳನ್ನು ಎಲ್ಐಸಿಗೆ ಮುಂಗಡವಾಗಿ ಪಾವತಿಸಬೇಕು, ಅನಂತರ ಪ್ರತಿಯೊಂದು ಮನವಿ ಸಲ್ಲಿಸುವ ಮುನ್ನವಿಮಾ ಸಂಸ್ಥೆಯು ಬೇಡಿಕೆಯನ್ನು ನಿರ್ವಹಿಸಿದ ಮತ್ತು ಪೂರ್ಣಗೊಳಿಸಿದ ವಿವರವುಳ್ಳ ವರದಿಯನ್ನು ನಮೂದಿಸಬೇಕು.

2. ಪ್ರೀಮಿಯಂನಲ್ಲಿರುವ ಕೇಂದ್ರ ಸರ್ಕಾರದ ಪಾಲನ್ನು ಎಲ್ಐಸಿಗೆ ನೇರವಾಗಿ ಕಳುಹಿಸುವುದು

**ಮೇಲ್ವಿಚಾರಣೆ ಮತ್ತು ಪ್ರಮಾಣ ನಿರ್ಧಾರ**

1. ಯೋಜನೆಯ ಅಭಿವೃದ್ಧಿಯ ಮೇಲ್ವಿಚಾರಣೆ ಮತ್ತು ಪ್ರಮಾಣ ನಿರ್ಧಾರವನ್ನು ರಾಜ್ಯ ಸರ್ಕಾರಗಳು ಮಾಡುತ್ತವೆ. ಅವು ನಾಲ್ಕು ತಿಂಗಳಿಗೊಮ್ಮೆ ಭೌತಿಕ ಮತ್ತು ಆರ್ಥಿಕ ಪರಗತಿ ವರದಿಗಳನ್ನು ಕೈಮಗ್ಗ ಅಭಿವೃದ್ಧಿ ಆಯುಕ್ತರಿಗೆ ಕಳುಹಿಸುತ್ತದೆ.
2. ರಾಜ್ಯ ಕೈಮಗ್ಗ ನಿರ್ದೇಶಕರು / ಆಯುಕ್ತರು ಮತ್ತು ಕೈಮಗ್ಗ ಸಹಾಯಕ ನಿರ್ದೇಶಕರ ಸಭೆಯನ್ನು ಎಲ್ಐಸಿಯು ಜಿಲ್ಲಾ ವಿಭಾಗದಲ್ಲಿ ಪ್ರತಿ ತಿಂಗಳ ಎರಡನೇ ವಾರದಲ್ಲಿ ನಡೆಸುತ್ತದೆ. ಆ ಸಭೆಯಲ್ಲಿ ಯೋಜನೆಯ ಪ್ರಗತಿ ಮತ್ತು ಎಂಜಿಜಿಬಿವೈ ಅನುಷ್ಠಾನದ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳುತ್ತದೆ. ರಾಜ್ಯ ಕಛೇರಿಗಳ ಮೂಲಕ ಇಲಾಖೆಗೆ ಅವಶ್ಯವಾದ ಮಾಹಿತಿಯನ್ನು ಎಲ್ಐಸಿ ಮುಂಚಿತವಾಗಿಯೇ ಸಂಗ್ರಹಿಸಿ ಅಂಕಿ ಅಂಶಗಳನ್ನು ನೀಡುತ್ತದೆ.
3. ಕೈಮಗ್ಗ ಅಭಿವೃದ್ಧಿ ಆಯುಕ್ತರ ಕಚೇರಿಯು ತನ್ನ ಕ್ಷೇತ್ರಾಧಿಕಾರಿಗಳ ಮೂಲಕ ಇಡೀ ಯೋಜನೆಯ ಬೆಳವಣಿಗೆಗಳನ್ನು ಗಮನಿಸುತ್ತದೆ ಮತ್ತು ರಾಜ್ಯ ಸರ್ಕಾರ ಮತ್ತು ಎಲ್ಐಸಿ ನಡುವೆ ಕಾಲ ಕಾಲಕ್ಕೆ ಸಭೆಗಳನ್ನು ಕರೆಯುತ್ತದೆ.
4. ಈ ಯೋಜನೆಯನ್ನು 11ನೇ ಪಂಚವಾರ್ಷಿಕ ಯೋಜನೆಯ ಮಧ್ಯಭಾಗದಲ್ಲಿ ಮೌಲ್ಯಮಾಪನ ಮಾಡಬೇಕು.

**ಬಿ.ಕೆ. ಸಿನ್ಹ**

ಅಭಿವೃದ್ಧಿ ಆಯುಕ್ತರು (ಕೈಮಗ್ಗ)
ದೂರವಾಣಿ : 23062945 ಮತ್ತು 23063684